
# ನಟನೆಯೇ ‘ಪರಮ’ ಧರ್ಮ

**ಪರಮ್ ಸ್ವಾಮಿ ಅಂದರೆ ತಕ್ಷಣಕ್ಕೆ ಹೆಚ್ಚಿನವರಿಗೆ ತಿಳಿಯದೇ ಇರಬಹುದು. ಆರು ವರ್ಷಗಳ ಹಿಂದೆ ಪಿ. ಶೇಷಾದ್ರಿ ಅವರ ನಿರ್ದೇಶನದಲ್ಲಿ ಮೂಡಿಬಂದ ‘ಮೋಹನದಾಸ’ ಕನ್ನಡ ಚಲನಚಿತ್ರದಲ್ಲಿ ಬಾಲಕ ಗಾಂಧಿ ‘ಮೋನ್ಯಾ’ ಆಗಿ ಅದ್ಭುತ ಅಭಿನಯ ನೀಡಿದ ಬಾಲಕನೇ ಈ ಪರಮ್ ಸ್ವಾಮಿ.**

■ ಕೃಷ್ಣಿ ಶಿರೂರ





‘ಮೋಹನದಾಸ’ ಸಿನಿಮಾದಲ್ಲಿ ಮೋನ್ಯಾ ಆದೆ. ಮುಂದೆ ‘ಹೆಬ್ಬಾಲ’ ನಾಟಕದಲ್ಲಿ ಈಗಜ್ಜನಾದೆ. ಅದು ಮಂಡ್ಯ ರಮೇಶ ಅವರ ನಿರ್ದೇಶನದಲ್ಲಿ ಪ್ರದರ್ಶನಗೊಂಡ ನಾಟಕ. ‘ಹೆಬ್ಬಾಲ’ ನನ್ನ ಮೊದಲ ಮುಖ್ಯ ಪಾತ್ರದ ನಾಟಕ. ನನ್ನ ಮೊದಲ ಆದ್ಯತೆ ನಟನೆ. ಆಮೇಲೆ ಓದು...’ ಹೀಗೆ ಮಾತು ಶುರು ಮಾಡಿದ ಹದಿನಾಲ್ಕರ ವಯಸ್ಸಿನ ಪರಮ್ ಸ್ವಾಮಿ, ತನ್ನ ನಟನಾ ಪಯಣವನ್ನು ಎಳೆಎಳೆಯಾಗಿ ತೆರೆದಿಟ್ಟ.

ಪಿ. ಶೇಷಾದ್ರಿ ಅವರ ‘ಮೋಹನದಾಸ’ ಸಿನಿಮಾಗೆ ಫೇಸ್‌ಬುಕ್ ಮೂಲಕ ಆಡಿಷನ್‌ಗೆ ಕರೆದಿದ್ದಾಗ ಅಮ್ಮ ಅರ್ಜಿ ಸಲ್ಲಿಸಿದ್ದರು. 1400ಕ್ಕೂ ಹೆಚ್ಚು ಎಂಟ್ರಿಗಳು ಬಂದಿದ್ವಂತೆ. ಅದ್ರಲ್ಲಿ 1000, 600, 200 ಹೀಗೆ ಪಟ್ಟಿ ಮಾಡುತ್ತಾ ಮಾಡುತ್ತಾ ಕೊನೆಯಲ್ಲಿ 20 ಮಕ್ಕಳನ್ನು ಆಯ್ಕೆ ಮಾಡಿದ್ರು. ಅದರಲ್ಲಿ ನಾನೂ ಒಬ್ಬ. ನಮಗೆ ಬೆಂಗಳೂರಿನಲ್ಲಿ 10 ದಿನಗಳ ಒಂದು ಕಾರ್ಯಾಗಾರ ಮಾಡಿದ್ರು. ತರಬೇತಿ ನಂತರ ನನ್ನನ್ನು ಬಾಲ ಗಾಂಧಿಯ ಪಾತ್ರಕ್ಕೆ ಆಯ್ಕೆ ಮಾಡಿದ್ರು. ಅದೇ ‘ಮೋನ್ಯಾ’ ಪಾತ್ರ.

ಆಡಿಷನ್‌ನಲ್ಲಿ ಆಯ್ಕೆ ಆದಾಗ ನಾನು ಗಾಡಿಯಲ್ಲಿ ಕೂತಿದ್ದೆ. ಅಮ್ಮ ಒಳಗೆ ಹೋಗಿದ್ರು. ಹೊರಗೆ ಬಂದು, ‘ನೀನೇ ಆಯ್ಕೆ ಆಗಿದ್ದೀಯಾ ಬಂಗಾರ’ ಅಂದ್ರು. ನಾನಾಗ ಮೂರನೇ ಕ್ಲಾಸ್‌ನಲ್ಲಿದ್ದೆ. ಏನೂ ಅರ್ಥ ಆಗ್ಲಿಲ್ಲ. ಹುಂ ಹುಂ, ನೈಸ್ ನೈಸ್ ಅಂತಷ್ಟೆ ಹೇಳಿದೆ. ನಂಗಿಂತ ಜಾಸ್ತಿ ಖುಷಿ ಅಮ್ಮಂಗಿತ್ತು.

‘ಮೋಹನದಾಸ’ ಚಿತ್ರದಲ್ಲಿ ನನ್ನ ಎಲ್ಲ ಚಿತ್ರೀಕರಣ ಗುಜರಾತ್‌ನಲ್ಲಿತ್ತು. ನಾನು, ಅಮ್ಮ, ಅಜ್ಜಿ ಗುಜರಾತ್‌ಗೆ ಹೋದ್ವಿ. ಪೋರ್‌ಬಂದರ್‌ನಲ್ಲಿ ಗಾಂಧಿ ಇದ್ದ ಮನೆಯಲ್ಲಿ, ಓಡಾಡಿದ್ದ ದಾರಿಯಲ್ಲಿ, ಓದಿದ್ದ ಶಾಲೆಯಲ್ಲಿ, ಬಾಲ್ಯದಲ್ಲಿ ಕಳೆದ ಜಾಗಗಳಲ್ಲೆಲ್ಲ ಚಿತ್ರೀಕರಣ ಮಾಡಿದ್ರು. ಮೋನ್ಯಾ ಆಗಿ ಚಿತ್ರೀಕರಣ ಮಾಡುವಾಗ ಎಲ್ಲರೂ ನೋಡೋರು. ಆಗೆಲ್ಲ ಒಂಥರಾ ಖುಷಿ ಆಗೋದು.

‘ಹೆಬ್ಬಾಲ’ ಕನ್ನಡದ ಗಾದೆಗಳ ಮೇಲೆ ಮಾಡಿದಂಥ ನಾಟಕ. ಅದರ ಕಥೆಯಲ್ಲಿ 200ಕ್ಕೂ ಹೆಚ್ಚು ಗಾದೆಗಳಿವೆ. ಕನ್ನಡದ ಬಗ್ಗೆ ಅಭಿಮಾನ ಹೆಚ್ಚಲಿ ಎಂದು ಮಾಡಿದ ಎರಡೂವರೆ ತಾಸಿನ ನಾಟಕ. ಅದು ನನ್ನ ಈವರೆಗಿನ ಪ್ರಮುಖ ನಾಟಕಗಳಲ್ಲಿ ಒಂದು. ನನ್ನ ಮೊದಲ ನಾಟಕ ನಿರ್ದೇಶನ ಮಾಡಿದ್ದು ಕಲಾವಿದ ಮಂಡ್ಯ ರಮೇಶ ಅವರು. ಅವರ ನಿರ್ದೇಶನದ ನಾಟಕದಲ್ಲಿ ನಾನು ಮುಖ್ಯ ಪಾತ್ರ ಮಾಡಿದ್ದು ನನಗೆ ಹೆಮ್ಮೆ. ಅದರ ನಂತರ ‘ಡಾಣ ಡಂಗುರ’ ನಾಟಕ. ನಂತರ 15 ನಾಟಕಗಳಲ್ಲಿ ಅಭಿನಯಿಸಿದ್ದೇನೆ. ಒಟ್ಟಾರೆಯಾಗಿ ಐದಾರು ನಾಟಕಗಳಲ್ಲಿ ಮುಖ್ಯ ಪಾತ್ರ ನಿರ್ವಹಿಸಿದ್ದೇನೆ.

ನಾನು ರಂಗಭೂಮಿ ತರಬೇತಿಗೆ ಸೇರಿದ್ದು ಮಂಡ್ಯ ರಮೇಶ ಅವರ ‘ನಟನ’ ರಂಗ ತರಬೇತಿ ಕೇಂದ್ರದಲ್ಲಿ. ಇಲ್ಲಿ ವಾರಾಂತ್ಯದ ತರಗತಿ ಇರುತ್ತದೆ. ಶನಿವಾರ ಮತ್ತೆ ಭಾನುವಾರ.  ಎರಡು ತಾಸು ಇರುತ್ತದೆ. ಹೆಚ್ಚೂ ಆಗಬಹುದು. ಆದ್ರೆ ಒಮ್ಮೊಮ್ಮೆ ಪರೀಕ್ಷೆಯ ಸಮಯದಲ್ಲಿಯೇ ಬರುತ್ತದೆ. ಆಗೆಲ್ಲ ಮನೆಗೆ ಬಂದ್ ತಕ್ಷಣ ಶಾಲೆಯ ಎಲ್ಲ ಕೆಲಸಗಳನ್ನೂ ಮುಗಿಸಿಕೊಳ್ತೀನಿ. ಸ್ಕೂಲು, ನಟನೆ ಎರಡರಲ್ಲಿ ನಾನು ಆಯ್ಕೆ ಮಾಡ್ಕೊಳ್ಳೊದು ನಟನೆಯನ್ನೇ.

ನಂಗೆ ವೇದಿಕೆ ಎಂದರೆ ಭಯ ಇಲ್ಲ. ಜನರನ್ನು ಕಂಡರೂ ಭಯ ಆಗುವುದಿಲ್ಲ. ಸಹಜವಾಗಿಯೇ ಅಭಿನಯಿಸುತ್ತೇನೆ. ಸಿನಿಮಾ, ಚಿತ್ರೀಕರಣದ ಸಂದರ್ಭದಲ್ಲಿ ಶಾಲೆಯಿಂದ ರಜೆಗಾಗಿ ಅನುಮತಿ ಪಡೆದಿದ್ದೆ. ಇದೆಲ್ಲ ಕೋವಿಡ್‌ಗಿಂತ ಮೊದಲೇ ಆಗಿತ್ತು. ಚಿತ್ರೀಕರಣ ಮುಗಿಸಿ ಬಂದ ತಕ್ಷಣ ನೋಟ್ಸ್ ತರಿಸಿಕೊಂಡು ಬರೀತಿದ್ದೆ. ಪರೀಕ್ಷೆಗಳನ್ನೂ ಆನ್‌ಲೈನ್‌ನಲ್ಲಿಯೇ ಬರೆದಿದ್ದೆ. ಕೋವಿಡ್‌ಗೆ ಮೊದಲೇ ಆನ್‌ಲೈನಿನಲ್ಲಿ